All India Radio: Bangalore
National Bulletins In Kannada
17.05.2025 / 7.35AM
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
*********

ಮುಖ್ಯಾಂಶಗಳು :

- ಗುಜರಾತ್‌ನ ಗಾಂಧಿನಗರದಲ್ಲಿಂದು ೭೦೮ ಕೋಟಿ ರೂಪಾಯಿ ಮೌಲ್ಯದ ವಿವಿಧ ಯೋಜನೆಗಳಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಚಾಲನೆ
- ದೇಶದ ವೀರ ಯೋಧರಿಗೆ ಗೌರವ ಸಲ್ಲಿಸಲು ಸಂಸ್ಕೃತಿ ಸಚಿವಾಲಯದಿಂದ ಏಕ್ ದೇಶ್ ಏಕ್ ದಢಕನ್ ಅಭಿಯಾನ
- ಭಾರತದ ವೈಮಾನಿಕ ದಾಳಿಗಳನ್ನು ಮೊದಲ ಬಾರಿಗೆ ಒಪ್ಪಿಕೊಂಡ ಪಾಕಿಸ್ತಾನ ಪ್ರಧಾನಿ
- ದೆಹಲಿ-ಎನ್‌ಸಿಆರ್‌ನಲ್ಲಿ ಗಾಳಿಯ ಗುಣಮಟ್ಟ ವಿಪರೀತ ಕುಸಿತ: ತಕ್ಷಣದಿಂದಲೇ GRAP ಹಂತ-೧ ಜಾರಿಗೆ
- ಒಂದು ವಾರ ಸ್ಥಗಿತದ ಬಳಿಕ ಇಂದಿನಿಂದ ಐಪಿಎಲ್ ಟಿ-೨೦ ಕ್ರಿಕೆಟ್ ಪುನರಾರಂಭ; ಬೆಂಗಳೂರಿನಲ್ಲಿಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು-ಕೋಲ್ಕತ್ತಾ ನೈಟ್ ರೈಡರ್ಸ್ ಮುಖಾಮುಖಿ

**********

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಗಾಂಧಿನಗರದಲ್ಲಿಂದು ೭೦೮ ಕೋಟಿ ರೂಪಾಯಿ ಮೌಲ್ಯದ ವಿವಿಧ ಯೋಜನೆಗಳನ್ನು ಉದ್ಘಾಟಿಸಿ, ಶಿಲಾನ್ಯಾಸ ನೆರವೇರಿಸಲಿದ್ದಾರೆ. ಇವುಗಳಲ್ಲಿ ಗಾಂಧಿನಗರ ಮಹಾನಗರ ಪಾಲಿಕೆ, ಗಾಂಧಿನಗರ ನಗರಾಭಿವೃದ್ಧಿ ಪ್ರಾಧಿಕಾರ - ಗುಡಾ ಮತ್ತು ಗಾಂಧಿನಗರ ಜಿಲ್ಲಾಡಳಿತದ ಯೋಜನೆಗಳು ಸೇರಿವೆ. ಇದರ ಜೊತೆಗೆ ಅಹಮದಾಬಾದ್ ಮತ್ತು ಮಹೇಶನದಲ್ಲಿ ನಾಳೆ, ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಂದು ತಮ್ಮ ಲೋಕಸಭಾ ಕ್ಷೇತ್ರದಲ್ಲಿ ಪ್ರಮುಖ ಮೂಲಸೌಕರ್ಯ ಮತ್ತು ಸಾರ್ವಜನಿಕ ಸೇವಾ ಯೋಜನೆಗಳನ್ನು ಉದ್ಘಾಟಿಸಲಿದ್ದಾರೆ ಎಂದು ನಮ್ಮ ಬಾತ್ಮೀದಾರರು ವರದಿ ಮಾಡಿದ್ದಾರೆ. ಇವುಗಳಲ್ಲಿ ವಾವೋಲ್‌ನಲ್ಲಿ ಹೊಸದಾಗಿ ನಿರ್ಮಿಸಲಾದ ಪ್ರಾಥಮಿಕ ಆರೋಗ್ಯ ಕೇಂದ್ರ, ಗಾಂಧಿನಗರದ ಹೊಸದಾಗಿ ಅಭಿವೃದ್ಧಿಪಡಿಸಲಾದ ಸೆಕ್ಟರ್ ೨೧ ಮತ್ತು ೨೨ ಅನ್ನು ಸಂಪರ್ಕಿಸುವ ಕೆಳಸೇತುವೆ, ಪೆಥಾಪುರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಕೊಲ್ವಾಡಾದ ಒಎನ್‌ಜಿಸಿ ಬಾವಿಯ ಬಳಿ ಹೊಸದಾಗಿ ಅಭಿವೃದ್ಧಿಪಡಿಸಲಾದ ಕೊಲ್ವಾಡ ಸರೋವರದ ಉದ್ಘಾಟನೆ ಸೇರಿವೆ. ಸಂಜೆ, ಸಚಿವರು, ಗಾಂಧಿನಗರ ಮಹಾನಗರ ಪಾಲಿಕೆ ಮತ್ತು ಅಂಚೆ ಇಲಾಖೆಯ ಹಲವಾರು ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಿ ಶಿಲಾನ್ಯಾಸ ನೆರವೇರಿಸಲಿದ್ದಾರೆ.

ಕಾರ್ಯಕ್ರಮದ ಸಂದರ್ಭದಲ್ಲಿ, ಗೃಹ ಸಚಿವರು ವಿವಿಧ ಅಂಚೆ ಯೋಜನೆಗಳ ಪ್ರಯೋಜನಗಳನ್ನು ಫಲಾನುಭವಿಗಳಿಗೆ ವಿತರಿಸಲಿದ್ದಾರೆ ಮತ್ತು ಸಾರ್ವಜನಿಕ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

**********

ದೇಶದ ವೀರಯೋಧರಿಗೆ ಗೌರವ ಸಲ್ಲಿಸುವ ಉದ್ದೇಶದಿಂದ ಕೇಂದ್ರ ಸಂಸ್ಕೃತಿ ಸಚಿವಾಲಯ "ಏಕ್ ದೇಶ್ ಏಕ್ ಧಡ್ಕನ್" - ಒಂದು ದೇಶ, ಒಂದು ಹೃದಯಬಡಿತ ಎಂಬ ಅಭಿಯಾನವನ್ನು ಪ್ರಾರಂಭಿಸಿದೆ. ಈ ಘೋಷವಾಕ್ಯ ಡಿಜಿಟಲ್ ವೇದಿಕೆಗಳಲ್ಲಿ ವ್ಯಾಪಕವಾಗಿ ಬಳಕೆಯಾಗುತ್ತಿದ್ದು, ರಾಷ್ಟ್ರೀಯ ಏಕತೆ, ದೇಶಭಕ್ತಿ ಮತ್ತು ತ್ರಿವರ್ಣ ಧ್ವಜಕ್ಕೆ ಗೌರವ ಸಲ್ಲಿಸುವ ಮನೋಭಾವವನ್ನು ಉತ್ತೇಜಿಸುತ್ತಿದೆ. ಈ ಅಭಿಯಾನ ಈಗಾಗಲೇ ದೇಶದಾದ್ಯಂತ ನಾಗರಿಕರ ಮನಮುಟ್ಟಿದ್ದು, ಕಳೆದ ೪೮ ಗಂಟೆಗಳ ಒಳಗೆ ಸಂಸ್ಕೃತಿ ಸಚಿವಾಲಯದ ಅಧೀನದಲ್ಲಿರುವ ೪೩ ಸಾಂಸ್ಕೃತಿಕ ಸಂಸ್ಥೆಗಳು ಈ ಅಭಿಯಾನದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿವೆ ಎಂದು ಸಚಿವಾಲಯ ತಿಳಿಸಿದೆ. ಪ್ರಮುಖ ಸಾಂಸ್ಕೃತಿಕ ಸಂಸ್ಥೆಗಳು ಮತ್ತು ಪಾರಂಪಾರಿಕ ಸ್ಮಾರಕಗಳನ್ನು ತ್ರಿವರ್ಣ ಧ್ವಜದ ಬಣ್ಣಗಳಲ್ಲಿ ಬೆಳಗಿಸಲಾಗಿದೆ. ಭಾರತೀಯ ಪುರಾತತ್ವ ಸಮೀಕ್ಷೆಯ ಮಾರ್ಗದರ್ಶನದಲ್ಲಿ, ದೇಶದಾದ್ಯಂತ ೭೦ಕ್ಕೂ ಹೆಚ್ಚು ಪಾರಂಪಾರಿಕ ಸ್ಮಾರಕಗಳನ್ನು ತ್ರಿವರ್ಣಜ ಬೆಳಕಿನಲ್ಲಿ ಪ್ರಜ್ವಲಿಸಲಾಗಿದೆ.

**********

ಭಾರತದ ವೈಮಾನಿಕ ದಾಳಿಗಳನ್ನು ಮೊದಲ ಬಾರಿಗೆ ಔಪಚಾರಿಕವಾಗಿ ಒಪ್ಪಿಕೊಂಡ ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್, ಮೇ ೯ ಮತ್ತು ಮೇ ೧೦ರ ನಡುವಿನ ರಾತ್ರಿಯಲ್ಲಿ ಭಾರತವು ಪಾಕಿಸ್ತಾನದ ಬಹು ವಾಯುನೆಲೆಗಳ ಮೇಲೆ ಕ್ಷಿಪಣಿ ದಾಳಿ ನಡೆಸಿದಾಗ ರಾವಲ್ಪಿಂಡಿಯಲ್ಲಿರುವ ನೂರ್ ಖಾನ್ ವಾಯುನೆಲೆಯ ಮೇಲೆ ದಾಳಿ ನಡೆಸಲಾಗಿದೆ ಎಂದು ದೃಢಪಡಿಸಿದ್ದಾರೆ. ನೂರ್ ಖಾನ್ ವಾಯುನೆಲೆಯನ್ನು ಭಾರತೀಯ ಕ್ಷಿಪಣಿ ದಾಳಿಯಿಂದ ಹೊಡೆದಿದೆ ಎಂಬ ಭಾರತದ ಹೇಳಿಕೆಯನ್ನು ಅವರು ಒಪ್ಪಿಕೊಂಡಿದ್ದಾರೆ. "ಮೇ ೯ ಮತ್ತು ಮೇ ೧೦ ರ ರಾತ್ರಿ, ಬೆಳಗಿನ ಜಾವ ೨:೩೦ ರ ಸುಮಾರಿಗೆ ಸೇನಾ ಮುಖ್ಯಸ್ಥರು ನನಗೆ ಕರೆ ಮಾಡಿ, ಭಾರತವು ತನ್ನ ಬ್ಯಾಲಿಸ್ಟಿಕ್ ಕ್ಷಿಪಣಿಗಳ ಮೂಲಕ ನಮ್ಮ ಮೇಲೆ ದಾಳಿ ಮಾಡಿದೆ ಎಂದು ಹೇಳಿದರು. ಒಂದು ಕ್ಷಿಪಣಿ ನೂರ್ ಖಾನ್ ವಾಯುನೆಲೆಯನ್ನು ಹೊಡೆದಿದೆ ಮತ್ತು ಇನ್ನೂ ಕೆಲವು ಇತರ ಪ್ರದೇಶಗಳನ್ನು ಹೊಡೆದಿವೆ" ಎಂದು ಷರೀಫ್ ಹೇಳಿದ್ದಾರೆ.

**********

ಮಧ್ಯಪ್ರದೇಶದಲ್ಲಿ ರೈಲ್ವೆ ಮೂಲಸೌಕರ್ಯವನ್ನು ಬಲಪಡಿಸುವ ನಿಟ್ಟಿನಲ್ಲಿ ೧೬೫೫ ಕೋಟಿ ರೂಪಾಯಿಗಳಿಗೂ ಹೆಚ್ಚು ಮೌಲ್ಯದ ಕರ್ಹಿ ಮತ್ತು ಸಗ್ಮಾ ನಡುವಿನ ಪ್ರಮುಖ ಹೊಸ ರೈಲು ಮಾರ್ಗ ಯೋಜನೆಗೆ ರೈಲ್ವೆ ಮಂಡಳಿ ಅನುಮೋದನೆ ನೀಡಿದೆ.

ಪಶ್ಚಿಮ ಮಧ್ಯ ರೈಲ್ವೆ - ಡಬ್ಲ್ಯೂಸಿಆರ್ ವಲಯದ ಅಡಿಯಲ್ಲಿ ಪ್ರಸ್ತಾವಿತ ರೈಲು ಮಾರ್ಗವು ೫.೩೧ ಕಿಲೋಮೀಟರ್ ಉದ್ದವಿದೆ. ಕರ್ಹಿ ಮತ್ತು ಸಗ್ರಾ ನಡುವಿನ ದ್ವಿಮುಖ ಚೋರ್ಡ್ ಮಾರ್ಗವು ಲಲಿತಪುರ-ಸಿಂಗರೌಲಿ ಹೊಸ ಮಾರ್ಗವನ್ನು ಅಸ್ತಿತ್ವದಲ್ಲಿರುವ ಇಟಾರ್ಸಿ-ಮಾಣಿಕ್ಪುರ ಮಾರ್ಗಕ್ಕೆ ಸಂಪರ್ಕ ಕಲ್ಪಿಸಲಿದೆ.

**********

ದೆಹಲಿ ಮತ್ತು ರಾಷ್ಟ್ರೀಯ ರಾಜಧಾನಿ ಪ್ರದೇಶದ - ಎನ್‌ಸಿಆರ್ ಗಾಳಿಯ ಗುಣಮಟ್ಟ 'ಕಳಪೆ' ಮಟ್ಟಕ್ಕೆ ಕುಸಿದ ಹಿನ್ನೆಲೆಯಲ್ಲಿ, ವಾಯು ಗುಣಮಟ್ಟ ನಿರ್ವಹಣಾ ಆಯೋಗ- ಸಿಎಕ್ಯೂಎಂ, ತಕ್ಷಣದಿಂದಲೇ ರ 'ಗ್ರೇಡೆಡ್ ರೆಸ್ಪಾನ್ಸ್ ಆಕ್ಷನ್ ಪ್ಲಾನ್' ಗ್ರ್ಯಾಪ್ - ಹಂತ ೧ ಜಾರಿಗೆ ತಂದಿದೆ. GRAP ಹಂತ-೧ ಅನ್ನು ಗಾಳಿಯ ಗುಣಮಟ್ಟ ಸೂಚ್ಯಾಂಕ ಎಕ್ಯೂಐ ೨೦೧ ರಿಂದ ೩೦೦ರ ನಡುವೆ ಇರುವಾಗ ಜಾರಿಗೊಳಿಸಲಾಗುತ್ತದೆ. ಈ ಹಂತದಲ್ಲಿ ಎನ್‌ಸಿಆರ್ ಭಾಗದ ವಿವಿಧ ಸಂಸ್ಥೆಗಳು ಅನುಸರಿಸಬೇಕಾದ ೨೭ ಮುನ್ನೆಚ್ಚರಿಕಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕಾಗಿದೆ. ಈ ಕ್ರಮಗಳಲ್ಲಿ, ಆಂಟಿ-ಸ್ಮೋಗ್ ಗನ್ ಬಳಕೆ, ನೀರು ಹರಿಸುವಿಕೆ, ರಸ್ತೆ ನಿರ್ಮಾಣ, ಮರುಸಂಸ್ಕರಣೆ ಹಾಗೂ ನಿರ್ವಹಣಾ ಕಾರ್ಯಗಳಲ್ಲಿ ಧೂಳು ಏಳದಂತೆ ಕ್ರಮಗಳನ್ನು ತೆಗೆದುಕೊಳ್ಳುವುದು ಸೇರಿದೆ. ಎನ್‌ಸಿಆರ್ ರಾಜ್ಯಗಳ ಮಾಲಿನ್ಯ ನಿಯಂತ್ರಣ ಮಂಡಳಿಗಳು ಮತ್ತು ದೆಹಲಿ ಮಾಲಿನ್ಯ ನಿಯಂತ್ರಣ ಸಮಿತಿಗೆ ಈ ಕ್ರಮಗಳ ಕಟ್ಟುನಿಟ್ಟಾದ ಅನುಷ್ಠಾನ ಖಚಿತಪಡಿಸಿಕೊಳ್ಳುವಂತೆ ಸೂಚಿಸಲಾಗಿದೆ. ಇದಕ್ಕೆ ಜೊತೆಗೆ, ಗ್ರ್ಯಾಪ್ ಉಪ ಸಮಿತಿ ನಾಗರಿಕರಿಗೆ ಸಹಕಾರ ನೀಡಲು ಹಾಗೂ ಗಾಳಿಯ ಗುಣಮಟ್ಟ ಸುಧಾರಣೆಗೆ ನಿಗದಿಪಡಿಸಿರುವ 'ನಾಗರಿಕ ಸಂಹಿತೆ' ನಿಯಮಗಳನ್ನು ಪಾಲಿಸಲು ಮನವಿ ಮಾಡಿದೆ. ಇದು ಸಾರ್ವಜನಿಕರ ಆರೋಗ್ಯವನ್ನು ಸಂರಕ್ಷಿಸಲು ಹಾಗೂ ಪರಿಸರದ ಸ್ಥಿತಿ ಸುಧಾರಿಸಲು ತೆಗೆದುಕೊಳ್ಳಲಾಗುತ್ತಿರುವ ಅಗತ್ಯ ಕ್ರಮವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**********

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮಾಸ್ ಕಮ್ಯುನಿಕೇಷನ್ - ಐಐಎಂಸಿ ಮುಂಬರುವ ಶೈಕ್ಷಣಿಕ ವರ್ಷದಿಂದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮದಲ್ಲಿ ಡಾಕ್ಟರ್ ಆಫ್ ಫಿಲಾಸಫಿ - ಪಿಎಚ್‌ಡಿ ಕಾರ್ಯಕ್ರಮವನ್ನು ಪ್ರಾರಂಭಿಸಲು ಸಿದ್ಧವಾಗಿದೆ. ಈ ಕಾರ್ಯಕ್ರಮದ ನಿಯಮಗಳನ್ನು ಸಂಸ್ಥೆಯು ಪ್ರಕಟಿಸಿದ್ದು, ಪ್ರವೇಶ ವಿವರಗಳನ್ನು ನಂತರ ಪ್ರಕಟಿಸಲಾಗುವುದು. ಐಐಎಂಸಿಯ ಉಪಕುಲಪತಿ ಡಾ. ಅನುಪಮಾ ಭಟ್ನಾಗರ್ ಅವರು ಹೊಸ ಕೋರ್ಸ್ ಅನ್ನು ಪ್ರಾರಂಭಿಸುವುದನ್ನು ದೃಢಪಡಿಸಿದ್ದಾರೆ ಪಿಎಚ್‌ಡಿ ಕಾರ್ಯಕ್ರಮವು ಮಾಧ್ಯಮ ಮತ್ತು ಸಂವಹನ ಕ್ಷೇತ್ರದಲ್ಲಿ ಸಂಶೋಧನೆಗೆ ಅನುವು ಮಾಡಿಕೊಡುತ್ತದೆ,

**********

ತಮಿಳುನಾಡಿನಲ್ಲಿ, ರಾಜ್ಯ ಬಿಜೆಪಿ ಘಟಕವು ತೆಂಕಾಸಿ, ತಿರುಪತ್ತೂರು, ತೂತುಕುಡಿ, ವೆಲ್ಲೂರು ಮತ್ತು ಥೇಣಿ ಜಿಲ್ಲೆಗಳ ವಿವಿಧ ಸ್ಥಳಗಳಲ್ಲಿ ತಿರಂಗ ಯಾತ್ರೆಗಳನ್ನು ನಡೆಸಿತು. ಬಿಜೆಪಿ ಕಾರ್ಯಕರ್ತರು, ನಾಯಕರು, ಮಾಜಿ ಸೈನಿಕರು ಮತ್ತು ಯುವಕರು ಯಾತ್ರೆಯಲ್ಲಿ ಭಾಗವಹಿಸಿದ್ದರು. ಭಾಗವಹಿಸಿದ್ದವರು ತ್ರಿವರ್ಣ ಧ್ವಜವನ್ನು ಹಿಡಿದು ರಕ್ಷಣಾ ಪಡೆಗಳ ಹೆಮ್ಮೆ ಮತ್ತು ತ್ಯಾಗವನ್ನು ಬೆಂಬಲಿಸುವ ಘೋಷಣೆಗಳನ್ನು ಕೂಗಿದರು.

**********

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಫಾರಿನ್ ಟ್ರೇಡ್ - ಐಐಎಫ್‌ಟಿ ಯುನೈಟೆಡ್ ಅರಬ್ ಎಮಿರೇಟ್ಸ್‌ನ ದುಬೈನಲ್ಲಿ ತನ್ನ ಮೊದಲ ವಿದೇಶಿ ಕ್ಯಾಂಪಸ್ ಸ್ಥಾಪನೆಯನ್ನು ಘೋಷಿಸಿದೆ. ಇದು ಐಐಎಫ್‌ಟಿಯ ಜಾಗತಿಕ ಉಪಸ್ಥಿತಿಯನ್ನು ವಿಸ್ತರಿಸುವಲ್ಲಿ ಮತ್ತು ಅಂತರರಾಷ್ಟ್ರೀಯ ವ್ಯಾಪಾರ ಶಿಕ್ಷಣದಲ್ಲಿ ಭಾರತದ ತೊಡಗಿಸಿಕೊಳ್ಳುವಿಕೆಯನ್ನು ಬಲಪಡಿಸುವಲ್ಲಿ ಪ್ರಮುಖ ಹೆಜ್ಜೆಯಾಗಿದೆ. ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರು, ಇದು ರಾಷ್ಟ್ರೀಯ ಶಿಕ್ಷಣ ನೀತಿ ೨೦೨೦ ರ ಚೈತನ್ಯವನ್ನು ನಿಜವಾಗಿಯೂ ಪ್ರತಿಬಿಂಬಿಸುತ್ತದೆ, ಇದು ಭಾರತೀಯ ಶಿಕ್ಷಣದ ಅಂತರಾಷ್ಟ್ರೀಕರಣದಲ್ಲಿ ಹೊಸ ಅಧ್ಯಾಯವನ್ನು ಮತ್ತು ಜಾಗತಿಕವಾಗಿ ಚಿಂತನೆಯ ನಾಯಕತ್ವವನ್ನು ರೂಪಿಸುವಲ್ಲಿ ಬೆಳೆಯುತ್ತಿರುವ ಪಾತ್ರವನ್ನು ಗುರುತಿಸುತ್ತದೆ ಎಂದು ಹೇಳಿದರು.

**********

ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷದಿಂದ ಒಂದು ವಾರ ಸ್ಥಗಿತಗೊಂಡಿದ್ದ ೧೮ನೇ ಆವೃತ್ತಿಯ ಇಂಡಿಯನ್ ಪ್ರೀಮಿಯರ್ ಲೀಗ್ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯಾವಳಿ ಇಂದಿನಿಂದ ಪುನರಾರಂಭಗೊಳ್ಳುತ್ತಿದೆ. ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಕೊಲ್ಕೊತ್ತಾ ನೈಟ್ ರೈಡರ್ಸ್ ತಂಡಗಳು ಸೆಣಸಾಟ ನಡೆಸಲಿವೆ. ಪಂದ್ಯ ಸಂಜೆ ೭.೩೦ ಕ್ಕೆ ಆರಂಭವಾಗಲಿದೆ. ಈ ಋತುವಿನಲ್ಲಿ ಫೈನಲ್ ಸೇರಿ ೧೭ ಪಂದ್ಯಗಳು ಬಾಕಿ ಉಳಿದಿವೆ. ಗುಜರಾತ್ ಟೈಟಾನ್ಸ್, ರಾಯಲ್ ಚಾಲೆಂಜರ್ಸ್ ಬೆಂಗಳೂರು ಸೇರಿ ೭ ತಂಡಗಳ ನಡುವೆ ಪ್ಲೇಆಫ್‌ಗಾಗಿ ಭಾರೀ ಪೈಪೋಟಿ ಏರ್ಪಟ್ಟಿದೆ. ಅಗ್ರ ಎರಡು ಸ್ಥಾನಗಳಲ್ಲಿರುವ ಗುಜರಾತ್ ಮತ್ತು ಬೆಂಗಳೂರು ತಂಡಗಳು ಇನ್ನೊಂದು ಪಂದ್ಯದಲ್ಲಿ ಗೆಲುವು ಸಾಧಿಸಿದರೂ ಪ್ಲೇಆಫ್‌ಗೆ ಅರ್ಹತೆ ಪಡೆಯಲಿವೆ. ಈ ಬಾರಿ ಐಪಿಎಲ್ ಪಂದ್ಯಾವಳಿಗೆ ಹೆಚ್ಚಿನ ಭದ್ರತೆ ಒದಗಿಸಲಾಗುತ್ತಿದೆ.

**********

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ - ಬಿಸಿಸಿಐ ಈ ತಿಂಗಳ ೩೦ ರಿಂದ ಪ್ರಾರಂಭವಾಗುವ ಮುಂಬರುವ ಇಂಗ್ಲೆಂಡ್ ಪ್ರವಾಸಕ್ಕಾಗಿ ಭಾರತ ಎ ತಂಡವನ್ನು ಪ್ರಕಟಿಸಿದೆ.

ಆಯ್ಕೆ ಸಮಿತಿಯು ಅಭಿಮನ್ಯು ಈಶ್ವರನ್ ಅವರನ್ನು ನಾಯಕನನ್ನಾಗಿ ಮತ್ತು ಧ್ರುವ್ ಜುರೆಲ್ ಅವರನ್ನು ಉಪನಾಯಕನನ್ನಾಗಿ ಪ್ರಕಟಿಸಿದೆ. ಕರುಣ್ ನಾಯರ್ ಕೂಡ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಇದಲ್ಲದೆ, ಶುಭಮನ್ ಗಿಲ್ ಮತ್ತು ಸಾಯಿ ಸುದರ್ಶನ್ ಎರಡನೇ ಪಂದ್ಯಕ್ಕೂ ಮುನ್ನ ತಂಡವನ್ನು ಸೇರಿಕೊಳ್ಳಲಿದ್ದಾರೆ.

**********